ಕೊಡದಿದ್ದರೆ ಅಷ್ಟೇ ಹೋಯ್ತು. ಬಡ್ಡಿ ಮಾತ್ರ ಪ್ರತೀ ತಿಂಗಳು ತಪ್ಪಬಾರದು. ತಪ್ಪಿದರೆ ಬಂತು ಕುತ್ತಿಗೆಗೆ. ಕೊಡ್ಲಿಕ್ಕೆ ಮನಸ್ಸುಂಟು, ಕೈಯಲ್ಲಿ ಕಾಸಿಲ್ಲ ಅಂತ ಸುಮ್ನೆ ಬಿಡ್ಲಿಕ್ಕೆ ಬರುವುದಿಲ್ಲ. ಹಾಗೆ ಬಿಟ್ಟರೆ ನಾಳೆ ದಿನ ಇನ್ನಿಬ್ಬರು ಕೈಯೆತ್ತುತ್ತಾರೆ. ಅವರನ್ನು ಮುಗಿಸುವುದೇ ಕ್ರಮ. ಅಂದರೆ ಉಳಿದವರು ಚುರುಕಾಗಿರುತ್ತಾರೆ. ಪೇಪರಿನಲ್ಲಿ ಹೆಂಡ್ತಿ ಮಕ್ಕಳಿಗೆ ವಿಷಕೊಟ್ಟು ಸತ್ತವರು, ನೇಣು ಹಾಕ್ಕೊಂಡವರು, ಕೆರೆಯಲ್ಲಿ ಮುಳುಗಿದವರು ಎಲ್ಲ ಹೇಗೆ ಸತ್ತರು? ಮೊದಲು ಅವರಿಗೆ ಸಾಲ ಇತ್ತಾ ನೋಡಿ ನೀವು!

ಎಲ್ಲ ಯಾಕೆ ಬಂತು ಎಂದರೆ ಈ ವಸಂತನಿಗೆ ಒಬ್ಬ ಹನ್ನೆರಡು ಸಾವಿರ ವಾಪಸ್ ಕೊಡದೆ ಸತಾಯಿಸುತ್ತಿದ್ದ. ನನ್ನ ಹತ್ತಿರ ಅದನ್ನೇ ಹೇಳುವವನಿದ್ದರೂ ಕುಪ್ಪುಸ್ವಾಮಿಯನ್ನು ನೋಡಿದ್ದೇ ನನ್ನನ್ನು ಬಿಟ್ಟು ಅವನ ಹತ್ತಿರ ಅದಕ್ಕೇನಾದರೂ ಪರಿಹಾರ ಸಿಗುತ್ತಾ ಅಂತ ಸತಾಯಿಸತೊಡಗಿದ. ಆದರೆ ಕುಪ್ಪುಸ್ವಾಮಿಗೆ ಬೇರೆಯವರ ರಗಳೆಗಳೆಲ್ಲ ಬೇಡವಿತ್ತು. ಸತಾಯಿಸ್ತಾ ಇರುವ ವ್ಯಕ್ತಿ ಮುಸ್ಲಿಂ ಎಂದು ತಿಳಿದದ್ದೇ ಸ್ವಲ್ಪ ಆಸಕ್ತಿ ಕುದುರಿತಾದರೂ ದುಡ್ಡು ಬರ್ಲಿಕ್ಕಿಲ್ಲ, ಬೇಕಿದ್ದರೆ ಬುದ್ಧಿ ಕಲಿಸಲಿಕ್ಕೆ ಜನ ಕಳಿಸುವಾ ಎಂದು ಎದ್ದ. ಥತ್! ಅವನಿಗೆ ಬುದ್ಧಿ ಕಲಿಸಿ ತನಗೇನಾಗಬೇಕಿದೆ ಎಂದು ವಸಂತನೂ ಎದ್ದ.

ಮರುದಿನ ಬೆಳಿಗ್ಗೆ ಯೋಗದರು ಶಾಂತಿಃ ಶಾಂತಿಃ ಶಾಂತಿಃ ಎನ್ನುತ್ತಲೇ ಇತ್ತ ಸೋಹಂ ಎಂದು ಊಳಿಡುವುದು ಸುರುವಾಯಿತು. ಅತ್ತ ರಾತ್ರಿಯಿಡೀ ಊರು ಸುತ್ತಲು ಹೋಗಿದ್ದ ದುರ್ಗಿಗೆ ಯಾದೇವೀ ಸರ್ವ ಭೂತೇಷು ಹಿಂಸಾರೂಪೇಣ ಸಂಸ್ಥಿತಾ ಎಂದು ಸ್ತೋತ್ರವೂ ಸುರುವಾಯಿತು. ಯಥಾ ಪ್ರಕಾರ ಭೀಮಸೇನ ಜೋಶಿ ಭರವಸೆ ಕಳೆದುಕೊಂಡ ಹಾಡು ತೆಗೆದರು. ರಾಧಾಕೃಷ್ಣ ಎಂಡ್ ಫ್ಯಾಮಿಲಿ ವ್ಯಾಯಾಮ ಸುರು ಮಾಡಿತು. ಶೇಷಗಿರಿ ಮಾತ್ರ ಪೇಪರ್ ಮಡಚಿ ಸ್ನಾನಕ್ಕಿಳಿಯಲಿಲ್ಲ.ಪತ್ರಿಕೆಯಲ್ಲಿ ಮೂವರನ್ನು ಸೆರೆ ಹಿಡಿದ ಬಗ್ಗೆ ಬಂದಿತ್ತಲ್ಲ. ಎಲ್ಲರೂ ಪೊಲೀಸರ ಕಾರ್ಯಕ್ಷಮತೆಯನ್ನು ಹೊಗಳಿದ್ದರು. ಆ ಎಲ್ಲರೂ ಡ್ರಗ್ಸ್ ಮತ್ತು ಮಾದಕ ಪದಾರ್ಥದ ವ್ಯವಹಾರದಲ್ಲಿ ತೊಡಗಿದ್ದರಂತೆ. ಕ್ರಿಕೆಟ್ ಬೆಟ್ಟಿಂಗ್ ವಿಷಯದಲ್ಲಿ ಏನೋ ತಕರಾರೆದ್ದು ಅದೇ ಕೊಲೆಯಲ್ಲಿ ಪರ್ಯವಸಾನವಾದ ಬಗ್ಗೆ ವಿವರವಾದ ವರದಿಯಿತ್ತು. ಹತ್ತೊಂಬತ್ತು ಇಪ್ಪತ್ತರ ಹರಯದ ಇವರೆಲ್ಲ ಫೈಟಿಂಗ್ ವೃತ್ತಿಯಲ್ಲಿ ತೊಡಗಿದ್ದವರಂತೆ! ಅದೆಂಥಾ ವೃತ್ತಿಯಪ್ಪಾ, ಹೊಸದಾಗಿದೆ ಎಂದುಕೊಳ್ಳುತ್ತ ಶೇಷಗಿರಿ ಹೆಂಡತಿಗೆ ವರದಿ ಒಪ್ಪಿಸಲು ಕಿಚನ್ನಿಗೆ ಹೋದ. ತನ್ನ ಕಿವಿಯಲ್ಲಿ ಏನೋ ಪಿಸುಗುಟ್ಟಿದಂತಾದ ವಿಷಯವನ್ನು ಮಾತ್ರ ಅವನು ತಪ್ಪಿಯೂ ಯಾರಿಗೂ ಹೇಳಲಿಲ್ಲ.

---

## ನರೇಂದ್ರ ಪೈ

ಸದಾ ಉತ್ತಮ ಸಾಹಿತ್ಯದ ಕಡೆ ತುಡಿಯುವ ನರೇಂದ್ರ ಪೈ ಮಂಗಳೂರಿನವರು. ಅಲ್ಲಿನ ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿರುವ ಪೈ ವಿಮರ್ಶಕ, ಕತೆಗಾರರಾಗಿ ಈಗಾಗಲೇ ಗುರುತಿಸಿಕೊಂಡಿದ್ದಾರೆ. ಸಮಕಾಲೀನ ಲೇಖಕರ ಮುಖ್ಯಕೃತಿಗಳ ಬಗ್ಗೆ ಬರೆದಿರುವ ಅವರ ಕಥಾಸಂಗ್ರಹ 'ಟಿಕ್ ಟಿಕ್ ಗೆಳೆಯ', 'ಕನಸುಗಳೇ ಮರಳಿ ಬನ್ನಿ'. ಅವರು ಕತೆಗಾರ ಎಸ್. ದಿವಾಕರ್ ಅವರ ಸಾಹಿತ್ಯವನ್ನು ಪರಿಚಯಮಾಡಿಕೊಡುವ ವಾಚಿಕೆ 'ರೂಪರೂಪಗಳನು ದಾಟಿ' ಸಂಪಾದಿಸಿದ್ದಾರೆ.